ಆ) ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಆಹಾರಧಾನ್ಯ ಸಾಮಗ್ರಿಗಳ ಮೇಲೆ ರಿಯಾಯಿತಿ ನೀಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಸರ್ಕಾರಕ್ಕೆ ಅಗತ್ಯವಿರುವ ಸಾಮಗ್ರಿ ಮತ್ತು ಸೇವೆಗಳ ಸಂಗ್ರಹಣೆ ಸಂಬಂಧದಲ್ಲಿ ಸರ್ಕಾರವು ಕರ್ನಾಟಕ ಪಾರದರ್ಶಕತಾ ಅಧಿನಿಯಮ 1999ನ್ನು ಜಾರಿಗೆ ತಂದಿರುವುದರ ಹಿನ್ನೆಲೆಯಲ್ಲಿ ಆಹಾರ ಪದಾರ್ಥಗಳ ಸಾಗಾಣಿಕೆಗಾಗಿ ಅಧಿನಿಯಮದಡಿ ಟೆಂಡರ್ ಪ್ರಕ್ರಿಯೆ ಕೈಗೊಂಡು ಸಾಗಣಿಕೆದಾರರನ್ನು ನೇಮಕ ಮಾಡಬೇಕಾಗಿರುತ್ತದೆ. ಇದಕ್ಕಾಗಿ ಸರ್ಕಾರದಿಂದ ಆದೇಶ ಸಂಖ್ಯೆ: ಆನಾಸ 41 ಆರ್‌ಪಿಆರ್ 2003, ದಿನಾಂಕ 27-1-2004ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟೆಂಡರ್ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯು ಪಾರದರ್ಶಕತಾ ಅಧಿನಿಯಮದ ಅನುಸಾರ ಟೆಂಡರ್ ಪ್ರಕ್ರಿಯೆ ಕೈಗೊಂಡು ಸಾಗಾಣಿಕೆದಾರರನ್ನು ನೇಮಿಸಲಾಗುತ್ತದೆ. ಇದರಲ್ಲಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳೂ ಭಾಗವಹಿಸ ಬಹುದಾಗಿರುತ್ತೆ. ನೇಮಕವಾದ ಸಾಗಾಣಿಕೆದಾರರು ಜಿಲ್ಲಾಧಿಕಾರಿಗಳು ಮತ್ತು ತಾಲ್ಲೂಕು ತಹಸೀಲ್ದಾರರು ನೀಡುವ ಮಾರ್ಗನಕ್ಷೆಯಂತೆ ಆಹಾರ ಧಾನ್ಯಗಳ ಸಾಗಾಣಿಕೆ ಮಾಡುತ್ತಾರೆ.

ಆ) ಕರ್ನಾಟಕ ಆಹಾರ ನಾಗರೀಕ ಸರಬರಾಜು ನಿಗಮ ನಿ. (ಕೆ.ಎಫ್.ಸಿ.ಎಸ್.ಸಿ) ಮತ್ತು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ (ಟಿ.ಎ.ಪಿ.ಸಿ.ಎಂ.ಎಸ್) ಗಳು ರಾಜ್ಯದ ಒಟ್ಟು ಸಗಟು ನಾಮಿನಿ ದಾರರುಗಳಾಗಿದ್ದು ಭಾರತ ಆಹಾರ ನಿಗಮದ ಗೋದಾಮುಗಳಿಂದ ಸರ್ಕಾರದ ಪರವಾಗಿ ಆಹಾರಧಾನ್ಯ ಎತ್ತುವಳಿ ಮಾಡುತ್ತಿದ್ದು ಇವರ ಮೂಲಕ ಆಹಾರ ಧಾನ್ಯಗಳನ್ನು ಪಡಿತರ ಅಂಗಡಿಗಳಿಗೆ ವಿತರಿಸಲಾಗುತ್ತಿದೆ. ಇದರಲಿ ಟಿ.ಎ.ಪಿ.ಸಿ.ಎಂ.ಎಸ್. ಗಳಿಗೆ ಪ್ರತ್ಯೇಕವಾಗಿ ರಿಯಾಯಿತಿ ನೀಡುವುದು ಸಾಧ್ಯವಿರುವುದಿಲ್ಲ. ಎಲ್ಲಾ ಸಗಟು ನಾಮಿನಿದಾರರಿಗೆ ಪ್ರತಿ ಕ್ವಿಂ. ಅಕ್ಕಿ ಮತ್ತು ಗೋಧಿಗೆ ರೂ. 20.00 ರಂತೆ ಲಾಭಾಂಶವನ್ನು costing sheet ಪ್ರಕಾರ ನೀಡಲಾಗುತ್ತಿದೆ ಹಾಗೂ ಸಾಗಾಣಿಕೆ ವೆಚ್ಚವನ್ನು ಪ್ರತ್ಯೇಕವಾಗಿ ಸರ್ಕಾರ ಭರಿಸುತ್ತಿದೆ.

572(502) ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳೆಗಳಿಗೆ ಆಕಸ್ಮಿಕ ಬೆಂಕಿ ದುರಂತ ಸಂಭವಿಸಿದಾಗ ಎಷ್ಟು ಪರಿಹಾರ ನೀಡಲಾಗುತ್ತಿದೆ;

ಆ) ಯಾವ ಆಧಾರದ ಮೇಲೆ ಅವರಿಗೆ ಪರಿಹಾರ ನೀಡಲಾಗುತ್ತಿದೆ?

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು)

ಅ) ಭಾರತ ಸರ್ಕಾರದ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿಯ ಪ್ರಕಾರ ಪರಿಹಾರ ನೀಡಲು ಅವಕಾಶಗಳಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

573(329) ಶ್ರೀ ಒಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 12ನೇ ವಿಧಾನ ಸಭಾ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿರುವಂತೆ ಸಹಕಾರ ಸಂಘಗಳು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ರೈತರಿಗೆ ನೀಡಿದ ಸಾಲದ ಮೇಲಿನ ಬಡ್ಡಿ ಹಣವನ್ನು ಮನ್ನಾ ಮಾಡಿದೆಯೇ;

ಆ) ಇಲ್ಲವಾದಲ್ಲಿ, ಕಾರಣಗಳೇನು? (ವಿವರ ನೀಡುವುದು);

ಇ) ನಿರುದ್ಯೋಗಿ ಯುವಕರಿಗೆ 500 ರೂ.ಗಳ ಮಾಸಿಕ ಭತ್ಯೆ ಕರುರಾದ ಘೋಷಣೆಯೂ ಜಾರಿಗೆ ಬಂದಿದೆಯೇ;

ಈ) ಇಲ್ಲವಾದಲ್ಲಿ ಕಾರಣಗಳೆನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸಹಕಾರ ಸಂಸ್ಥೆಗಳ ಮೂಲಯ ರೈತರಿಗೆ ನೀಡಿದ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿರುವುದಿಲ್ಲ. ಆದಾಗ್ಯೂ ದಿನಾಂಕ 1-4-2004ರಿಂದ ಸಹಕಾರ ಸಂಸ್ಥೆಗಳಿಂದ ರೈತರಿಗೆ ಶೇಕಡ 6ರ ಬಡ್ಡಿ ದರದಲ್ಲಿ ಕೃಷಿ ಸಾಲ ನೀಡಲು ಸರ್ಕಾರವು ಆದೇಶ ಹೊರಡಿಸಿರುತ್ತದೆ.

ಇ) ಸಹಕಾರ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

574(332) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ರೈತರ ಸಾಲದ ಮೇಲಿನ ಬಡ್ಡಿ ಎಷ್ಟು ಮನ್ನಾ ಮಾಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಆ) ಮನ್ನಾ ಮಾಡಿದ ಬಡ್ಡಿ ಬಾಬ್ತು ಜಿಲ್ಲಾವಾರು ಪ್ರಾಥಮಿಕ ಪತ್ತಿನ ಗ್ರಾಮೀಣ ವ್ಯವಸಾಯ ಸಹಕಾರ ಬ್ಯಾಂಕುಗಳಿಗೆ ಸರ್ಕಾರ ಕೊಡಬೇಕಾದ ಮೊತ್ತ 31-3-2004ಕ್ಕೆ ಅನ್ವಯಿಸುವಂತೆ ಎಷ್ಟು ಆ ಮೊತ್ತದಲ್ಲಿ ಇನ್ನೂ ಕೊಡಬೇಕಾದ ಬಾಕಿ ಮೊತ್ತ ಎಷ್ಟು;

ಇ) ರೈತರ ಸಾಲದ ಬಡ್ಡಿ ಮನ್ನಾ ಮಾಡಲು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವೆಷ್ಟು (31-3-2004ಕ್ಕೆ ಅನ್ವಯಿಸುವಂತೆ ವಿವರ ನೀಡುವುದು);